ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

Sandalkote Building at Chikmagalur (suitability to locate Intermediate College).

Q.—106. **Srimathi B. L. SUBBAMMA** (Chikmagalur-Mudigere).—

Will the Government be pleased to state :—

(*a*) whether an order has been issued recently that the Sandalkote Building be given away to the Intermediate College at Chikmagalur due to want of sufficient accommodation in the present building in which the said college is now located ;

(*b*) whether the public have not deposited one lakh of rupees for shifting the Sandalkote to some other place;

(*c*) whether they would take steps for the proper maintenance of the college ?

A.—**Sri A. G. RAMACHANDRA RAO** (Minister for Law and Education).—

(*a*) Yes. In November 1952.
(*b*) Yes.
(*c*) Yes.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಇಂಟರ್ ಮೀಡಿಯಟ್ ಕಾಲೇಜಿಗೆ ಸರಿಯಾದ ಕಟ್ಟಡವಿಲ್ಲದೆ ಇರುವುದರಿಂದ, ಚಿಕ್ಕಮಗಳೂರಿನಲ್ಲಿ ಪಬ್ಲಿಕ್ ಲೈಬ್ರೆರಿ, ಟೌನ್‌ಹಾಲ್ ಮತ್ತು ಮುನಿಸಿಪಾಲಿಟಿಗಳಿಗೆ ಸ್ವಳಕ್ಕೆ ಅನಾನುಕೂಲವಾಗಿರುವುದು ಸರ್ಕಾರಕ್ಕೆ ಗೊತ್ತಿದೆಯೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.— ಗೊತ್ತಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇದಕ್ಕೆ ಅನುಕೂಲ ಪಡಿಸಲು ಸರ್ಕಾರದವರು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಾಲೇಜಿಗೆ ಅನುಕೂಲ ಪಡಿಸುವುದಕ್ಕಾಗಿ, ಸ್ಯಾಂಡಲ್ ಕೋಟಿ ಮತ್ತು ಫಾರೆಸ್ಟ್ ನರ್ಸರಿಯನ್ನು ಬೇರೆಕಡೆಗೆ ಹಾಕಿಬಿಡಿ ಎಂದು ತೀರ್ಮಾನ ಮಾಡಿದ್ದೇವೆ, ಮತ್ತು ಇರತಕ್ಕಂಥ ಹಣವನ್ನು ವಿಂಗಡನೆಮಾಡಿ ಜಾಗ್ರತೆ ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ತೀರ್ಮಾನ ಮಾಡಿ ಎರಡು ವರ್ಷಗಳಾದರೂ ಕೂಡ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ. ಯೂನಿವರ್ಸಿಟಿಗೂ ಕೂಡಾ ತಿಳಿಸಿದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಉತ್ತರದಲ್ಲಿ ಒತ್ತಾಯ ಪಡಿಸುತ್ತಿದ್ದೇವೆ ಎಂದು ಹೇಳಿದಿರಿ. ಯಾರನ್ನು ಸ್ವಾಮಿ ತಾವು ಒತ್ತಾಯ ಪಡಿಸುತ್ತಾ ಇರುವುದು ?

Sri A. G. RAMACHANDRA RAO.—Both the University and the Forest Department.

ಶ್ರೀ ಟಿ. ಸಿ. ಬಸಪ್ಪ.—ಹಣ ಡಿಪಾಸಿಟ್ ಮಾಡಿ ಎರಡು ವರ್ಷಗಳಾದರೂ ಇನ್ನೂ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಯಾವ ಇಲಾಖೆಯವರು ಕಾರಣ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲಾ departmentಗಳೂ ಕಾರಣ ಎಂದುಹೇಳಿ ಬಹುದು.

ಶ್ರೀ ಟಿ. ಸಿ. ಬಸಪ್ಪ.—ಸರ್ಕಾರದವರು ಈ ವರ್ಷವಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದಿಂದ ತಡವಾಗುತ್ತಾ ಇಲ್ಲ. ಸರ್ಕಾರದವರು order ಮಾಡಿ ಆಗಿದೆ. ಅದನ್ನು ಜಾಗ್ರತೆ ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಜಿಲ್ಲಾ ಬೋರ್ಡಿನವರು ನರ್ಸರಿ ಜಾಗಕ್ಕೆ 3 ಸಾವಿರ ರೂಪಾಯಿಗಳ ಮೇಲ್ಪಟ್ಟು ಕೊಡಬೇಕೆಂದು ಹೇಳಿರುವುದು ನಿಜವೇ ?

Sri A. G. RAMACHANDRA RAO.—I want notice.

ಶ್ರೀ ಜಿ. ಪುಟ್ಟಸ್ವಾಮಿ.—Compensation ಕೇಳಿರುವುದು ಜಾಸ್ತಿ, ಅದನ್ನು ಕಡಮೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿ ಮಾಡಿರುವುದು ನಿಜವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲನೇ ಪ್ರಶ್ನೆ ಗೊತ್ತಿಲ್ಲ. ಆದ್ದರಿಂದ ಎರಡನೇ ಪ್ರಶ್ನೆಗೆ ಉತ್ತರ ಹೇಗೆ ಹೇಳುವುದು ?

ಶ್ರೀ ಜಿ. ಪುಟ್ಟಸ್ವಾಮಿ.—ಸರ್ಕಾರದಲ್ಲಿ ಈ ಸಂಬಂಧಪಟ್ಟ ರಿಕಾರ್ಡು ಬಾಕಿ ಇದೆ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇನೆ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—Intermediate College ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಕಟ್ಟಡಗಳಲ್ಲಿ ನಡೆಯುತ್ತಿದೆ ?

ಶ್ರೀ ಎ. ಜಿ ರಾಮಚಂದ್ರರಾವ್.—ಮಾನ್ಯ ಸದಸ್ಯರಿಗೇ ಅದು ಚೆನ್ನಾಗಿ ಗೊತ್ತಿದೆ.

12-30 P.M.

Intermediate College in Malleswaram

Q.—475. **Sri V. R. NAIDU** (Malleswaram).—

Will the Government be pleased to state :—

(*a*) whether the establishment of an Intermediate College in the northern extension of the City, *viz.*, Malleswaram for the benefit of the boy and

(Sri V. R. NAIDU.)

girl students of the northern extension is under their contemplation ;

(*b*) if so, when they will do it ?

A.—**Sri A. G. RAMACHANDRA RAO** (Minister for Law and Education).—

(*a*) No.

(*b*) Does not arise.

ಶ್ರೀ ವಿ. ಆರ್. ನಾಯ್ಡು.—ಮಲ್ಲೇಶ್ವರಂನಲ್ಲಿ ಒಂದು ಇಂಟರ್ ಮೀಡಿಯಟ್ ಕಾಲೇಜನ್ನು ಸ್ಥಾಪಿಸುವ ಆಲೋಚನೆಯಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರದಲ್ಲೇ ಸಾಧ್ಯವಿಲ್ಲವೆಂದು ಹೇಳಿದ್ದೇವೆ; ಸ್ಪಷ್ಟವಾಗಿದೆ.

ಶ್ರೀ ವಿ. ಆರ್. ನಾಯ್ಡು.—ಮಲ್ಲೇಶ್ವರಂ ಬಡಾವಣೆಯಲ್ಲಿ ಸ್ಕೂಲಿಗೆ ಹೋಗುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೆಚ್ಚಿಗೆ ಇರುವುದರಿಂದ ಕೂಡಲೆ ಒಂದು ಇಂಟರ್ ಮೀಡಿಯಟ್ ಕಾಲೇಜನ್ನು ಸ್ಥಾಪಿಸುತ್ತಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾರ್ವಜನಿಕರು ಸಹಾಯ ಮಾಡಲು ಮುಂದೆ ಬಂದರೆ ಯೂನಿವರ್ಸಿಟಿಯವರೂ ಆ ಬಗ್ಗೆ ಸಹಾಯ ಮಾಡುವುದಾಗಿ ಹೇಳಿದ್ದಾರೆ. ಸಾರ್ವಜನಿಕರು ಯಾರೂ ಇನ್ನೂ ಮುಂದೆ ಬಂದಿಲ್ಲ. ಪ್ರಶ್ನೆ ಮಾತ್ರ ಕೇಳುತ್ತಲೇ ಇದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಹಾಗಾದರೆ ಸಾರ್ವಜನಿಕರು ತಮ್ಮ ಮುಂದೆ ನಿಯೋಗ ಬಂದ ಮೇಲೆ ಕೃಪೆಯಿಟ್ಟು ಮಾಡಿಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿಯೋಗ ಬರುವುದಲ್ಲ ; ಸಾರ್ವಜನಿಕರು ಯಾವ ರೀತಿ ಸಹಾಯ ಮಾಡುವುದಕ್ಕೆ ಮುಂದೆ ಬರುತ್ತಾರೋ ಅದನ್ನು ನೋಡಿಕೊಂಡು ಸರ್ಕಾರದವರೂ ಸಹಾಯ ಮಾಡುವುದಕ್ಕೆ ನಿರ್ಧಾರ ಮಾಡುತ್ತಾರೆ.

Depressed Class Lecturers in University.

Q.—269. **Sri G. DUGGAPPA** (Holalkere—Scheduled Castes).—

Will the Government be pleased to State :—

(*a*) the total number of Lecturers in the University ?

(*b*) the number of Depressed Class Lecturers in the University ?

A.—**Sri A. G. RAMACHANDRA RAO** (Minister for Law and Education).—

(*a*) 557.

(*b*) Twelve.

ಶ್ರೀ ಜಿ. ದುಗ್ಗಪ್ಪ.—557 ಜನ ಲೆಕ್ಚರರುಗಳಿದ್ದಾರೆಂದು ಹೇಳಿದ್ದೀರಿ. ಇವರನ್ನೆಲ್ಲಾ ನೇರವಾಗಿ ನೇಮಕ ಮಾಡಿಕೊಂಡಿದ್ದೀರಾ ?

Sri A. G. RAMACHANDRA RAO.—Yes, through the Public Service Commission.

ಶ್ರೀ ಜಿ. ದುಗ್ಗಪ್ಪ.—ಈ ರೀತಿಯಾಗಿ ನೇರವಾಗಿ ನೇಮಕ ಮಾಡಿಕೊಳ್ಳುವಾಗ ಹಿಂದುಳಿದ ತರಗತಿಗಳವರಿಗೆ 16⅔ ಭಾಗವನ್ನು ಮೀಸಲಾಗಿಡಬೇಕೆಂಬ ನಿಯಮವನ್ನು ವಿಶ್ವವಿದ್ಯಾನಿಲಯದವರಿಗೆ ತಿಳಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಿಳಿಸಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಯಾವಾಗ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿಬಂಧನೆಗಳು ಆದ ತಕ್ಷಣ ತಿಳಿಸಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಅಲ್ಲಿಂದೀಚೆಗೆ ಆ ರೂಲ್ ಪ್ರಕಾರ ಎಷ್ಟು ಜನ ಹಿಂದುಳಿದ ಪಂಗಡದವರನ್ನು ವಿಶ್ವವಿದ್ಯಾನಿಲಯದಲ್ಲಿ ನೇಮಿಸಿಕೊಳ್ಳಲಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಬಿ. ಟಿ. ಕೆಂಪರಾಜ್.—ಹೋದ ವರುಷ ಜುಲೈ ತಿಂಗಳಿನಲ್ಲಿ ಜಿಯಾಲಜಿ ಭಾಗಕ್ಕೆ 3 ಜನ ಲೆಕ್ಚರರುಗಳನ್ನು ತೆಗೆದುಕೊಂಡಿದ್ದೀರಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಜಿ. ಪುಟ್ಟಸ್ವಾಮಿ.—ಇವೆಲ್ಲಾ ಸಪ್ಲಿಮೆಂಟರಿಯಾಗಿ ಉದ್ಭವಿಸುವ ಪ್ರಶ್ನೆಗಳಾಗಿರುವುದರಿಂದ ರಿಕಾರ್ಡ್‌ಗಳನ್ನು ನರಿಯಾಗಿ ನೋಡಿ ಜವಾಬು ಕೊಡಕೂಡದೇ ?

ಅಧ್ಯಕ್ಷರು.—ನೇರವಾದ ಪ್ರಶ್ನೆಯಾದರೆ ಉತ್ತರ ಹೇಳುತ್ತಾರೆ. ಇಲ್ಲದಿದ್ದರೆ ನೋಟೀಸ್ ಕೇಳಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಸರ್ಕಾರಿ ಹುಕುಮನ್ನು ಅವರು ಅಕ್ಷರಶಃ ಪಾಲಿಸಿದ್ದಾರೆಯೇ ಇಲ್ಲವೇ ಎಂದು ರಿಪೋರ್ಟ್ ತರಿಸಿಕೊಂಡು ನೋಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಲೋಪವಾಗಿರುವುದೇನೂ ಕಂಡು ಬಂದಿಲ್ಲ.

ಶ್ರೀ ಕೆ. ಪ್ರಭಾಕರ್.—16⅔%ಗೆ ಕಡಮೆಯಿಲ್ಲದಂತೆ ನೇಮಕ ಮಾಡಿಕೊಳ್ಳಬೇಕೆಂದು ಸರ್ಕಾರಿ ಹುಕುಂ ಇದೆ. ಹಾಗಿರುವಾಗ, 49 ಜನರ ಪೈಕಿ ಒಬ್ಬರನ್ನು ಮಾತ್ರ ತೆಗೆದುಕೊಂಡಿದ್ದರೆ ಸರಿಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರಿಯಾದ ಅರ್ಹತೆಯಿರುವವರು ಬಂದಿದ್ದರೆ ಕೊಡುತ್ತಿದ್ದರು.

ಶ್ರೀ ಕೆ. ಪ್ರಭಾಕರ್.—ಸರಿಯಾದ ಅರ್ಹತೆಯಿರುವವರು ಬಂದರೂ ಯಾವುದೋ ನೆಪದ ಮೇಲೆ ತಳ್ಳಿಹಾಕುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—16⅔ ಭಾಗ ಕೊಡಬೇಕು ಎನ್ನುವುದರಲ್ಲಿ, ಇಲ್ಲಿಯ ವರೆಗೂ ಅಲ್ಲಿರ ತಕ್ಕ ಒಟ್ಟು ಸ್ಥಾನಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಯೋ, ಅಥವಾ ಹುಕುಂ ಆದ ಮೇಲೆ ಉಂಟಾದ ಸ್ಥಾನಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಯೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹುಕುಂ ಆದ ಮೇಲೆ fill ಮಾಡಬೇಕಾಗಿ ಬಂದಿರುವುದನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

Professors and Assistant Professors in the University.

Q.—322. **Sri K. PUTTASWAMY** (Sreerangapatna).—

Will the Government be pleased to state :—